# ಹಲ್ಲಾ ಬೋಲ್

'ಜಗವೇ ನಾಟಕರಂಗ, ಮನುಷ್ಯರೆಲ್ಲರೂ ಪಾತ್ರಧಾರಿಗಳು' ಎಂಬ ಮಾತು ಸಾಧಾರಣವಾಗಿ ಬಳಕೆಯಾಗುತ್ತಿರುತ್ತದೆ. ನಟ ಇದ್ದ ಮೇಲೆ ಅವನನ್ನು ಕಥಾಸೂತ್ರಕ್ಕೆ ಹೊಂದಿಸಿ ನಟಿಸುವಂತೆ ಮಾಡುವ ಗಾರುಡಿಗ ಇರಲೇಬೇಕು. ಈ ಗಾರುಡಿಗನನ್ನು ನಿರ್ದೇಶಕ ಎಂದೇ ಕರೆಯಲಾಗುತ್ತದೆ. ನಾಟಕವೆನ್ನುವುದು ಸಾಮಾನ್ಯರ, ಅಸಾಮಾನ್ಯರ ಬದುಕಿನ ಪ್ರತಿಕೃತಿಯೇ ಆಗಿರುತ್ತದೆ. ಎಲ್ಲ ನಾಟಕಗಳು ಅಂತಿಮವಾಗಿ ನೋವು, ನಲಿವು, ವಿಷಾದಗಳೊಂದಿಗೆ ಬದುಕು ಗೆಲ್ಲುವುದನ್ನು ಕಟ್ಟಿಕೊಡುತ್ತವೆ. ಹೀಗಾಗಿಯೇ ನಮ್ಮ ಹಿರಿಯರು ಲೀಲಾವಿನೋದವನ್ನು ಉಂಟುಮಾಡುವ ದೈವವನ್ನು ಕುರಿತು 'ಸೋಲಿಸಬೇಡ ಗೆಲಿಸಯ್ಯಾ' ಎಂದೇ ಬೇಡಿಕೊಳ್ಳುತ್ತಾರೆ.

ನಾಟಕ ಎಂದ ತಕ್ಷಣ ಒಂದು ಕಾಲದಲ್ಲಿ ವೈಭವೋಪೇತವಾದ ರಂಗಸಜ್ಜಿಕೆಯ ವೃತ್ತಿ ರಂಗಭೂಮಿ ನಮ್ಮ ಕಣ್ಣ ಮುಂದೆ ಬರುತ್ತದೆ. ಹೆಣ್ಣು ಪಾತ್ರಧಾರಿಗಳಾದರೆ ಭರ್ಜರಿ ಹಾರ, ಸೊಂಟಪಟ್ಟಿ, ಕಿರೀಟ, ಗಾಢಬಣ್ಣದ ಹೊಳೆವ ಸೀರೆ ನೆನಪಾಗುತ್ತವೆ. ಗಂಡುಪಾತ್ರಧಾರಿಗಳಾದರೆ ಹುರಿಗಟ್ಟಿದ ಮೀಸೆ, ಕಚ್ಚೆಪಂಚೆ, ಕೈಯಲ್ಲೊಂದು ಗದೆ ಇಲ್ಲವೇ ಬಿಲ್ಲುಬಾಣಗಳು ನೆನಪಾಗುತ್ತವೆ. ಒಟ್ಟಿನಲ್ಲಿ ಜಗಮಗಿಸುವ ಲೋಕವೊಂದು ಕಣ್ಣೆದುರು ಮೂಡುತ್ತದೆ. ಆಧುನಿಕ ರಂಗಭೂಮಿಯ ನಾಟಕಗಳು ಸೀದಾಸಾದಾ ಜಗತ್ತನ್ನು ಚಿತ್ರಿಸುತ್ತವೆ. 70ರ ದಶಕದಲ್ಲಿ ವೇದಿಕೆಯಿಂದ ಕೆಳಗಿಳಿದ ನಾಟಕಗಳು ಬೀದಿನಾಟಕಗಳಾಗಿ ಸಾಮಾನ್ಯ ಮನುಷ್ಯರ ಸುಖದುಃಖಗಳನ್ನು ಕುರಿತು ಅವರ ಪಕ್ಕದಲ್ಲೇ ಕುಳಿತು ಮಾತನಾಡಲು ಆರಂಭಿಸಿದವು. ಇದೊಂದು ಕ್ರಾಂತಿಕಾರಿ ನಡೆಯಾಗಿದ್ದು ಮಾತು ಕಳಕೊಂಡವರ ಪರವಾಗಿ ಬೀದಿನಾಟಕ ನಿಂತಿತು.

ಬೀದಿನಾಟಕಗಳು ಎಂದ ತಕ್ಷಣ ನಮ್ಮ ಕಣ್ಣಮುಂದೆ ನಿಲ್ಲುವುದು ಸಪ್ದರ್ ಹಾಶ್ಮಿ. ಜನವರಿ 1, 1989ರಂದು ಸಪ್ದರ್ ನಾಟಕವಾಡುತ್ತಲೇ ಪ್ರಭುತ್ವದ ಗೂಂಡಾಗಳಿಂದ ಹಲ್ಲೆಗೊಳಗಾದ ದಿನ. ಹಲ್ಲೆಯಿಂದ ಚೇತರಿಸಿಕೊಳ್ಳದ ಅವರು ಮರುದಿನ ಕೊನೆಯುಸಿರುಬಿಟ್ಟರು.

ನಾಲ್ಕು ಜನ ಬದುಕುವಂತೆ ಬದುಕಿದರೆ ಜೀವಕ್ಕೆ ತೊಂದರೆಯಿಲ್ಲ. ಜೀವದಾಸೆಗಿಂತ ಮೌಲ್ಯಗಳಿಗಾಗಿ ಬದುಕುವುದು ದೊಡ್ಡದೆಂದುಕೊಂಡವರು ಹಲವು ಕಷ್ಟಗಳಿಗೆ ಈಡಾಗಲೇಬೇಕಾಗುತ್ತದೆ. ದೆಲ್ಲಿಯ 'ಇಪ್ಟಾ' (ಇಂಡಿಯನ್ ಪೀಪಲ್ಸ್ ಥಿಯೇಟರ್ ಅಸೋಸಿಯೇಷನ್) ಒಂದು ಕ್ರಿಯಾಶಾಲಿಯಾದ ಅಖಿಲ ಭಾರತ ಚಳವಳಿಯಾಗಿತ್ತು. 1940ರ ದಶಕದಲ್ಲಿ ವಸಾಹತು ವಿರೋಧಿ ಮತ್ತು ಪ್ಯಾಸಿಸ್ಟ್ ವಿರೋಧಿ ಹೋರಾಟಗಳಲ್ಲಿ ತೊಡಗಿಸಿಕೊಂಡಿದ್ದವರ ವೇದಿಕೆಯಾಗಿತ್ತು. ಸುಮಾರು ಹತ್ತೊಂಬತ್ತರ ಹರೆಯದ ಸಪ್ದರ್ ಇಪ್ಟಾದೊಂದಿಗೆ ಗುರುತಿಸಿಕೊಳ್ಳುತ್ತಾರೆ.

ಅಮೆರಿಕದ ವಾರ್ತಾ ಸೇವೆಯ ವಿರುದ್ಧ ಪ್ರತಿಭಟಿಸಲೆಂದು 'ನಿಕ್ಸನ್ ಕಿಸಿಂಜರ್ ಸಂಭಾಷಣೆ' ನಾಟಕ ರಚಿಸಲಾಗುತ್ತದೆ. ಇದು ಸಪ್ದರ್ ಮೊದಲ ನಾಟಕ. ಮುಂದೆ ಸಪ್ದರ್ ಕೆಲವರು 'ಜನಮ್' ಎಂದೇ ಕರೆಸಿಕೊಳ್ಳುವ 'ಜನ ನಾಟ್ಯ ಮಂಡಳಿ' ಕಟ್ಟಿಕೊಳ್ಳುತ್ತಾರೆ. 'ಭಾರತ ಭಾಗ್ಯ ವಿಧಾತ', 'ಬಕ್ರಿ', 'ಕುರ್ಸಿ ಕುರ್ಸಿ' ಮುಂತಾದ ಬೀದಿ ನಾಟಕಗಳು ಜನಮ್ ಆಡುತ್ತದೆ. ಇಪ್ಟಾದ ಮಲಯಶ್ರೀ ರಾಯ್ ಅವರೊಂದಿಗೆ ಮದುವೆ ಮಾಡಿಕೊಳ್ಳುತ್ತಾರೆ. ಇಬ್ಬರೂ ಎಡಪಂಥೀಯ ವಿಚಾರವಾದಿಗಳಾಗಿದ್ದು ರಂಗಚಟುವಟಿಕೆಗಳು ಇನ್ನಷ್ಟು ವಿಸ್ತಾರವಾಗುತ್ತವೆ. ಪ್ರಭುತ್ವದ ದೌರ್ಜನ್ಯವನ್ನು ಪ್ರತಿಭಟಿಸಲು ಬಳಸಿಕೊಂಡ ಅಸ್ತ್ರವೆಂದರೆ ಬೀದಿ ನಾಟಕಗಳು. ಇಲ್ಲಿ ನಿಂತಲ್ಲೇ ಬೇರುಬಿಟ್ಟು ಹೆಮ್ಮರವಾಗುವ ಕ್ರಿಯೆ ನಡೆಯುತ್ತದೆ.

1975ರಲ್ಲಿ ರಂಗಾಸಕ್ತಿಯ ಎಡಪಂಥೀಯ ಕಾರ್ಯಕರ್ತರಿಂದ 'ಸಮುದಾಯ' ಚಳವಳಿಯ ರೂಪಪಡೆಯಿತು. ಕರ್ನಾಟಕದಾದ್ಯಂತ ಹಲವಾರು ಘಟಕಗಳನ್ನು ಹೊಂದಿದ್ದ ಸಮುದಾಯದ ಮೊದಲ ನಾಟಕ ಬಿ.ವಿ. ಕಾರಂತ್ ನಿರ್ದೇಶಿಸಿದ 'ಹುತ್ತವ ಬಡಿದರೆ'. ನಂತರ ಪ್ರಸನ್ನ ನಿರ್ದೇಶಿಸಿದ 'ತಾಯಿ', 'ಗೆಲಿಲಿಯೋ' ಪ್ರದರ್ಶನಗೊಂಡವು. 1977ರಲ್ಲಿ ಬಿಹಾರದ ಬೆಲ್ಚಿಯಲ್ಲಿ ನಡೆದ ದಲಿತರ ಭೀಕರ ಮಾರಣಹೋಮ ಕುರಿತ ಬೀದಿನಾಟಕವೇ ಸಮುದಾಯದ ಮೊದಲ ಬೀದಿ ನಾಟಕವಾಗಿತ್ತು. 1979ರಲ್ಲಿ ಪ್ರದರ್ಶನಗೊಂಡ ಈ ನಾಟಕದ ರಚನೆ, ನಿರ್ದೇಶನ ಸಿ.ಜಿ. ಕೃಷ್ಣಸ್ವಾಮಿ ಮಾಡಿದ್ದರು. ಇದಕ್ಕೆ ಶಕ್ತಿ ತುಂಬುವಂತೆ ಹೋರಾಟದ ಹಾಡನ್ನು ಬರೆದವರು ಕವಿ ಸಿದ್ದಲಿಂಗಯ್ಯ.

ರಾಜ್ಯದಲ್ಲಿ ಬೀದಿನಾಟಕಗಳ ಅಸ್ತಿತ್ವಕ್ಕೆ 'ಚಿತ್ರಾ' ತಂಡದ ಮೂಲಕ ಬುನಾದಿ ಹಾಕಿದವರು ಎ.ಎಸ್. ಮೂರ್ತಿ ಹಾಗೂ ವಿಜಯಮ್ಮ ಅವರು. ಹಲವು ಯಶಸ್ವಿ ಪ್ರಯೋಗಗಳ ನಂತರ ಜನಮ್ ತಂಡ 'ಚಕ್ಕಾ ಜಾಮ್' ಎಂಬ ನಾಟಕದ ಸಿದ್ಧತೆ ನಡೆಸಿತು. ಸಪ್ದರ್ ಈ ನಾಟಕವನ್ನು ರಚಿಸಿದ್ದರು. ಬೀದಿನಾಟಕಗಳಲ್ಲಿ ಬರಿಯ ಹೋರಾಟ, ಕ್ರಾಂತಿ ಮಾತ್ರವೇ ಇರುತ್ತದೆ, ಪ್ರೇಮವೇಕಿಲ್ಲ ಎಂಬ ಜನರ ಪ್ರಶ್ನೆಗೆ ಉತ್ತರವೆಂಬಂತೆ ಈ ನಾಟಕ ರಚಿಸಲಾಗಿದೆ. ಪ್ರೇಮದ ಮೂಲಕ ಆರಂಭವಾಗುವ ಈ ನಾಟಕ ಕಾರ್ಮಿಕನಾದ ಪ್ರೇಮಿಯ ಕಡಿಮೆ ಸಂಬಳ, ವ್ಯವಸ್ಥೆಯ ಕ್ರೌರ್ಯ, ಬಂಡವಾಳಶಾಹಿಯ ಹಲವು ಮುಖಗಳನ್ನು ಪರಿಚಯಿಸುತ್ತದೆ. ಕಾರ್ಮಿಕರ ಹೋರಾಟ, ಅವರ ಮೇಲೆ ಪೊಲೀಸ್ ಕ್ರೌರ್ಯವನ್ನು ಈ ನಾಟಕ ಹಿಡಿದಿಟ್ಟಿತ್ತು. ದೇಶದಲ್ಲಿ ಕಾರ್ಮಿಕರು ಮತ್ತು ಬಂಡವಾಳಶಾಹಿಗಳ ಸಂಘರ್ಷ ತಾರಕಕ್ಕೇರಿದ ಸಂದರ್ಭದಲ್ಲಿ ಕಾರ್ಮಿಕರ ಆಶೋತ್ತರಗಳನ್ನು ಪ್ರತಿನಿಧಿಸಿದ ಈ ನಾಟಕವನ್ನು ಸಪ್ದರ್ 'ಹಲ್ಲಾ ಬೋಲ್' ಎಂದು ಬದಲಾಯಿಸುತ್ತಾರೆ. ಈ ನಾಟಕ ನಡೆಯುವ ಸಂದರ್ಭದಲ್ಲೇ ಬಂಡವಾಳಶಾಹಿಗಳ ಪರವಾದ ಪೊಲೀಸರು ನುಗ್ಗುತ್ತಾರೆ. ಸಪ್ದರ್ ಮತ್ತು ಸಂಗಡಿಗರ ಮೇಲೆ ಹಲ್ಲೆ ಆಗುತ್ತದೆ.

ಜನವರಿ 1, 1989 ರಂದು ನಡೆದ ಹಲ್ಲೆಯಲ್ಲಿ ತೀವ್ರವಾಗಿ ಗಾಯಗೊಂಡ ಸಪ್ದರ್ ಜನವರಿ 2, 1989 ರಂದು ಆಸ್ಪತ್ರೆಯಲ್ಲಿ ಅಸುನೀಗುತ್ತಾರೆ. ಜನವರಿ 4, 1989 ಪತ್ನಿ ಮಲಯಶ್ರೀ ಹಲ್ಲೆಯಾದ ಸ್ಥಳದಲ್ಲೇ 'ಹಲ್ಲಾಬೋಲ್' ನಾಟಕವನ್ನು ಪ್ರತಿಭಟನೆಯೆಂಬಂತೆ ಪ್ರದರ್ಶಿಸುತ್ತಾರೆ. ಬೀದಿನಾಟಕಗಳು ವ್ಯವಸ್ಥೆಯನ್ನು ಸುಧಾರಿಸುವಲ್ಲಿ ಪ್ರಭುತ್ವದೊಂದಿಗೆ ನಡೆಸಲೇಬೇಕಾದ ಸಂಘರ್ಷದ ಅನಿವಾರ್ಯತೆಯನ್ನು, ಕಾರ್ಮಿಕರ ಆಶೋತ್ತರಗಳನ್ನು ಈಡೇರಿಸುವಲ್ಲಿ ಸಪ್ದರ್ ಹಾಶ್ಮಿಗೆ ಇದ್ದ ಬದ್ಧತೆಯನ್ನು ಹಲ್ಲಾಬೋಲ್ ನಾಟಕ ವ್ಯಕ್ತ ಪಡಿಸುತ್ತದೆ. ನಾಲ್ಕು ದಿನಗಳ ವಾಸ್ತವಿಕ ಘಟನಾವಳಿಗಳನ್ನು ಜನಮ್ ತಂಡದ ಸದಸ್ಯರು 'ಹಲ್ಲಾಬೋಲ್' ಕೃತಿಯಲ್ಲಿ ರೂಪಿಸಿದ್ದಾರೆ. ಸಪ್ದರ್ ಅವರನ್ನು ಹತ್ತಿರದಿಂದ ಬಲ್ಲ ಹಾಗೂ ಸಮುದಾಯದ ಹಿರಿಯ ಸಂಗಾತಿಯೂ ಆದ ಎಂ.ಜಿ. ವೆಂಕಟೇಶ್ ಅವರು ಇದನ್ನು ಕನ್ನಡಕ್ಕೆ ತಂದಿದ್ದಾರೆ. ಹಲ್ಲಾಬೋಲ್ ಎಂದರೆ ವ್ಯವಸ್ಥೆಯ ವಿರುದ್ಧ ಧ್ವನಿಯೆತ್ತು ಅಥವಾ ವಿರೋಧಿಸು ಎಂದರ್ಥ.

■ **ಅಮೃತಮತಿ**

## ಮಾತೇ ಮುತ್ತು

- ಪ್ರತಿ ರಾಷ್ಟ್ರವೂ ಚರಿತ್ರೆಯ ಪಠ್ಯಪುಸ್ತಕಗಳಲ್ಲಿ ಆತ್ಮಪ್ರಶಂಸೆ ಮಾಡಿಕೊಳ್ಳುವ ಗುರಿಯತ್ತ ನೋಡುತ್ತದೆ.

  —ಬರ್ಟ್ರಂಡ್ ರಸೆಲ್

- ಮನುಷ್ಯ ತನ್ನ ಜೀವನವನ್ನು ಎಷ್ಟು ಸಂಕುಚಿತಗೊಳಿಸಿದರೆ ಅದು ಅಷ್ಟು ಬಡವಾಗುತ್ತದೆ.

  —ಗೋಪಾಲಕೃಷ್ಣ ಅಡಿಗ

- ಉತ್ಸಾಹಿಗೆ ಎಲ್ಲವೂ ಸುಲಭವೆಂದೇ ಅನುಭವಕ್ಕೆ ಬರುತ್ತದೆ.

  —ರಿಚರ್ಡ್

- ಕಲೆಗಿಂತ ಮಾನವತ್ವ ದೊಡ್ಡದು, ಕಲಾವಿದನಿಗಿಂತ ಕಲೆ ದೊಡ್ಡದು.

  —ಟಿ.ಪಿ. ಕೈಲಾಸಂ

- ಕಲೆಯಿಂದ ಜಡವು ಚೇತನವಾಗಿ, ಜೀವನದ ನೀರಸತೆ ಕಿಡಿಯಾಗಿ ಪ್ರವಹಿಸುವುದು ನೂತನತೆ ಚಿರವಾಗಿ.

  —ಕುವೆಂಪು

- ಕಾಲ ಎಂಬ ಮುದಿ ದಾದಿ ನನಗೆ ತಾಳ್ಮೆ ಕಲಿಸಿದಳು.

  —ಜಾನ್ ಕೀಟ್ಸ್